ವಿಜಯ ಕರ್ನಾಟಕ

Thursday, December 15, 2011



ವಿನೋದ್ ಗೌಡ
ಆಟದ ಭಂಗಿ

# ಫೈನಲ್‌ಗೆ ಜೈನ್, ಎಸ್‌ಆರ್‌ಎಂ

▪ ವಿಕ ಸುದ್ದಿಲೋಕ ಮಂಗಳೂರು

ಬೆಂಗಳೂರಿನ ಜೈನ್ ವಿವಿ ಹಾಗೂ ತಮಿಳುನಾಡಿನ ಎಸ್‌ಆರ್‌ಎಂ ವಿವಿ ತಂಡಗಳು ದಕ್ಷಿಣ ವಲಯ ಅಂತರ್ ವಿವಿ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಸುತ್ತಿಗೆ ಪ್ರವೇಶ ಪಡೆದಿವೆ.

ಮಣಿಪಾಲ ವಿ.ವಿ ಮರೀನಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಬುಧವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಬೆಂಗಳೂರು ಜೈನ್ ತಂಡ 3-0 ಅಂತರದಿಂದ ಹಾಲಿ ಚಾಂಪಿಯನ್ ಹೈದರಾಬಾದ್‌ನ ಒಸ್ಮಾನಿಯಾ ತಂಡವನ್ನು ಸದೆಬಡಿಯಿತು. ಜೈನ್ ವಿವಿ ಫೈನಲ್ ಪಂದ್ಯದಲ್ಲಿ ತಮಿಳುನಾಡಿನ ಎಸ್‌ಆರ್‌ಎಂ ತಂಡದ ಸವಾಲು ಎದುರಿಸಲಿದೆ.

ಸೆಮಿಫೈನಲ್ ಪಂದ್ಯದ ಮೊದಲ ಸಿಂಗಲ್ಸ್‌ನಲ್ಲಿ 18 ವರ್ಷದೊಳಗಿನವರ 3ನೇ ಶ್ರೇಯಾಂಕಿತ ಆಟಗಾರ ಜೈನ್ ವಿವಿಯ ವಿನೋದ್ ಗೌಡ 6-2, 4-6, 6-2ರಿಂದ ಪ್ರದೀಪ್ ರೆಡ್ಡಿ ಅವರನ್ನು ಸೋಲಿಸಿದರು. ಮೊದಲ ಸೆಟ್‌ನ್ನು ಸುಲಭವಾಗಿ ಗೆದ್ದ ವಿನೋದ್ ಎರಡನೇ ಸೆಟ್‌ನಲ್ಲಿ ತೀರಾ ಬಳಲಿದಂತೆ ಕಂಡುಬಂದರಲ್ಲದೆ ಸೆಟ್‌ನ್ನು ಬಿಟ್ಟುಕೊಡಬೇಕಾಯಿತು. ಆದರೆ ನಿರ್ಣಾಯಕ ಮೂರನೇ ಸೆಟ್‌ನಲ್ಲಿ ಮತ್ತೆ ಚೇತರಿಸಿಕೊಂಡ ವಿನೋದ್ ಎದುರಾಳಿ ಮೇಲೆ ಸವಾರಿ ಮಾಡಿ ಸೆಟ್ ವಶಪಡಿಸಿಕೊಂಡು ಗೆಲುವಿನ ನಗೆ ಬೀರಿದರು. ಇನ್ನೊಂದು ಸಿಂಗಲ್ಸ್‌ನಲ್ಲಿ ಕಿರಣ್ ನಂದಕುಮಾರ್ ತರಣ್ ರಾಮಯ್ಯ ಸವಾಲನ್ನು 6-1, 601 ನೇರ ಸೆಟ್‌ಗಳಿಂದ ಹಿಂದಿಕ್ಕಿದರು. ಡಬಲ್ಸ್‌ನಲ್ಲಿ ಸಾಗರ್-ವಸಂತ್ ಜೋಡಿ ಪ್ರದೀಪ್ ರೆಡ್ಡಿ-ಪ್ರದೀಪ್ ಸೇಸ್ವಾಲ್ ಜೋಡಿಯನ್ನು 6-2, 6-3ರಿಂದ ಮಣಿಸಿ ತಂಡ ಫೈನಲ್‌ಗೇರುವಲ್ಲಿ ನೆರವಾದರು.

ಎಸ್‌ಆರ್‌ಎಂಗೆ ರೋಚಕ ಜಯ

ಎರಡನೇ ಸೆಮಿಫೈನಲ್‌ನಲ್ಲಿ ತಮಿಳುನಾಡಿನ ಎಸ್‌ಆರ್‌ಎಂ ವಿವಿ ತಂಡ 3-1ರಿಂದ ಅಣ್ಣಾಮಲೈ ವಿವಿ ತಂಡವನ್ನು ಪರಾಭವಗೊಳಿಸಿ ಫೈನಲ್‌ಗೇರಿತು. ಮೊದಲ ಸಿಂಗಲ್ಸ್‌ನಲ್ಲಿ ಅಣ್ಣಾಮಲೈ ವಿವಿಯ ಪಿ. ವೆಂಕಟರಮಣನ್ 7-5, 3-6, 6-1ರಿಂದ ಎಸ್‌ಆರ್‌ಎಂನ ಮಾನವ್ ಕುಮಾರ್ ಚಕ್ಕಾರನ್ನು ಸೋಲಿಸಿ ತಂಡಕ್ಕೆ ಮುನ್ನಡೆ ಒದಗಿಸಿಕೊಟ್ಟಿದ್ದರು.

ಆದರೆ ಎರಡನೇ ಸಿಂಗಲ್ಸ್‌ನಲ್ಲಿ ಎಸ್‌ಆರ್‌ಎಂನ ಪಿ. ಮಣಿಕಂಠನ್ 6-3, 6-1ರಿಂದ ಮೊಹಮ್ಮದ್ ಮುಬೀನ್ ವಿರುದ್ಧ ಹಾಗೂ ಮತ್ತೊಂದು ಸಿಂಗಲ್ಸ್‌ನಲ್ಲಿ ಅಣ್ಣಾಮಲೈ ವಿವಿಯ ಪಿ. ವೆಂಕಟರಮಣನ್ ವಿರುದ್ಧ 7-5, 6-3ರಿಂದ ಸೋಲಿಸಿ ತಂಡಕ್ಕೆ ಮುನ್ನಡೆ ತಂದಿತ್ತು. ಡಬಲ್ಸ್‌ನಲ್ಲಿ ಎಸ್‌ಆರ್‌ಎಂ ವಿವಿಯ ಮಣಿಕಂಠನ್-ಹರಿಪ್ರಶಾಂತ್ 6-3, 6-2ರಿಂದ ಮೊಹಮ್ಮದ್ ಮುಬೀನ್-ವೆಂಕಟರಮಣನ್ ವಿರುದ್ಧ ಜಯ ಸಾಧಿಸಿ ತಂಡವನ್ನು ಫೈನಲ್‌ಗೆ ಕೊಂಡೊಯ್ಯುವಲ್ಲಿ ಯಶಸ್ವಿಯಾದರು.

ಇದಕ್ಕೂ ಮೊದಲು ನಡೆದ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಬೆಂಗಳೂರು ಜೈನ್ ವಿವಿ 3-0 ಅಂತರದಿಂದ ಕಳೆದ ವರ್ಷದ ಸೆಮಿಫೈನಲಿಸ್ಟ್ ಮದ್ರಾಸ್ ವಿವಿ ವಿರುದ್ಧ, ಎಸ್‌ಆರ್‌ಎಂ ವಿವಿ 3-0ಯಿಂದ ಕಳೆದ ವರ್ಷದ ಸೆಮಿಫೈನಲಿಸ್ಟ್ ರಾಜೀವ್ ಗಾಂಧಿ ಹೆಲ್ತ್ ಸೈನ್ಸ್ ವಿವಿ ವಿರುದ್ಧ, ಅಣ್ಣಾಮಲೈ ವಿವಿ ತಂಡ 3-0 ಅಂತರದಿಂದ ಕಳೆದ ಬಾರಿಯ ರನ್ನರ್ ಅಪ್ ಆಂಧ್ರಪ್ರದೇಶ ವಿವಿ ವಿರುದ್ಧ ಮತ್ತು ಕಳೆದ ಬಾರಿಯ ವಿಜೇತ ಹೈದರಾಬಾದ್‌ನ ಒಸ್ಮಾನಿಯಾ ವಿವಿ 3-0ಯಿಂದ ವೆಲ್ಲೂರಿನ ವಿಐಟಿ ವಿವಿ ವಿರುದ್ಧ ಜಯ ಸಾಧಿಸಿ ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿದ್ದವು.